

# ನಿಯಮ ಉಲ್ಲಂಘನೆ ಯೂಟ್ಯೂಬ್ ಗದಾಪ್ರಹಾರ

**ನಿಯಮ ಉಲ್ಲಂಘನೆ ಕಾರಣಕ್ಕಾಗಿ ಲಕ್ಷಾಂತರ ಚಾನಲ್‌ಗಳನ್ನು ನಿಷೇಧಿಸಿರುವ ಯೂಟ್ಯೂಬ್, ಲಕ್ಷಾಂತರ ವಿಡಿಯೊಗಳನ್ನು ತನ್ನ ವೇದಿಕೆಯಿಂದ ತೆಗೆದುಹಾಕಿದೆ.**


■ **ಶಶಿಕುಮಾರ್ ಸಿ.**

ಯೂಟ್ಯೂಬ್ ಸಾರ್ವತ್ರಿಕ ಬಳಕೆಯ ಪ್ಲಾಟ್‌ಫಾರ್ಮ್. ಅದೆಷ್ಟೋ ಮಂದಿಗೆ ಆದಾಯದ ಮೂಲ. ಕೋಟ್ಯಂತರ ಮಂದಿಗೆ ಸ್ಫೂರ್ತಿಯ ಚಿಲುಮೆ. ಇಂತಹ ವೇದಿಕೆಯಲ್ಲಿ ಅಪ್‌ಲೋಡ್ ಆಗುವ ವಿಡಿಯೊಗಳ ಕಂಟೆಂಟ್ ಬಗ್ಗೆ ಯೂಟ್ಯೂಬ್ ಕಟ್ಟುನಿಟ್ಟಿನ ನಿಲುವು ಹೊಂದಿದೆ. ನಿಯಮ ಮೀರಿದ ಯಾವುದೇ ವಿಡಿಯೊಗಳ ಬಗ್ಗೆ ವರದಿಯಾದ ಕೂಡಲೇ ಅದನ್ನು ಪರಿಶೀಲಿಸಿ ತನ್ನ ವೇದಿಕೆಯಿಂದ ಡಿಲೀಟ್ ಮಾಡುತ್ತದೆ.

ಇಂತಹದ್ದೇ ವಿಚಾರಕ್ಕೆ ಈಗ ಸುದ್ದಿಯಲ್ಲಿರುವ ಯೂಟ್ಯೂಬ್, ಈಚೆಗೆ ನಿಯಮ ಉಲ್ಲಂಘನೆ ಆರೋಪದಡಿ ಜಗತ್ತಿನಾದ್ಯಂತ 90.5 ಲಕ್ಷ ವಿಡಿಯೊಗಳನ್ನು ಡಿಲೀಟ್ ಮಾಡಿದೆ. ಈ ಪೈಕಿ ಭಾರತದಲ್ಲಿ ಅಪ್‌ಲೋಡ್ ಮಾಡಿದ 29 ಲಕ್ಷ ವಿಡಿಯೊಗಳನ್ನು ಯೂಟ್ಯೂಬ್ ಡಿಲೀಟ್ ಮಾಡಿದೆ. ಇದೇ ಆರೋಪದಡಿ ಜಗತ್ತಿನಾದ್ಯಂತ 48 ಲಕ್ಷ ಯೂಟ್ಯೂಬ್ ಚಾನಲ್‌ಗಳನ್ನೂ ನಿರ್ಬಂಧಿಸಿದೆ.

ಡಿಲೀಟ್ ಮಾಡಿದ ವಿಡಿಯೊಗಳಲ್ಲಿ ಭಾರತದ್ದೇ ಅತಿಹೆಚ್ಚಿನ ಪಾಲು. ಎರಡನೇ ಸ್ಥಾನ ಬ್ರೆಜಿಲ್‌ನದ್ದು. ಈ ಮಾಹಿತಿಯನ್ನು ಈಚೆಗೆ ಯೂಟ್ಯೂಬ್ ಬಿಡುಗಡೆ ಮಾಡಿದ್ದು, 'ಕಮ್ಯುನಿಟಿ ಗೈಡ್‌ಲೈನ್ಸ್ ಎನ್‌ಫೋರ್ಸ್‌ಮೆಂಟ್' ವರದಿಯಲ್ಲಿ ಉಲ್ಲೇಖಿಸಲಾಗಿದೆ. 2024ರ ಅಕ್ಟೋಬರ್ ಮತ್ತು ಡಿಸೆಂಬರ್ ನಡುವೆ, ಯೂಟ್ಯೂಬ್ ಭಾರತದಲ್ಲಿ ಈ ಕ್ರಮವನ್ನು ಕೈಗೊಂಡಿದೆ.

ಅತಿಹೆಚ್ಚು ವಿಡಿಯೊಗಳನ್ನು ಡಿಲೀಟ್ ಮಾಡಿದ ದೇಶಗಳ ಪೈಕಿ ಭಾರತ 2020ರಿಂದಲೂ ಮೊದಲ ಸ್ಥಾನದಲ್ಲೇ ಇದೆ. ಯೂಟ್ಯೂಬ್ ರೂಪಿಸಿರುವ ನಿಯಮಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದೆ, ನಿಯಮಕ್ಕೆ ವಿರುದ್ಧವಾದ ಕಂಟೆಂಟ್‌ವುಳ್ಳ ವಿಡಿಯೊಗಳನ್ನು ಭಾರತೀಯರೇ ಹೆಚ್ಚು ಅಪ್‌ಲೋಡ್ ಮಾಡುತ್ತಿದ್ದಾರೆ ಎಂಬುದನ್ನು ಈ ವರದಿ ಸೂಚಿಸುತ್ತಿದೆ.



### ನಿಯಮ ಉಲ್ಲಂಘನೆ ಪತ್ತೆಗೆ ಎಐ ಅಸ್ತ್ರ

ಡಿಲೀಟ್ ಮಾಡಿದ ವಿಡಿಯೊಗಳ ಕಂಟೆಂಟ್‌ಗಳಲ್ಲಿ ದ್ವೇಷ ಭಾಷಣ, ವದಂತಿ ಮತ್ತು ಕಿರುಕುಳ, ಅಪರಾಧ, ಹಿಂಸೆಯಂತಹ ಅಂಶಗಳಿರುವುದನ್ನು ಯೂಟ್ಯೂಬ್ ಗುರುತಿಸಿದೆ. ಮಕ್ಕಳನ್ನು ಅಪಾಯಕ್ಕೆ ಸಿಲುಕಿಸುವಂತಹ ಕಂಟೆಂಟ್‌ಗಳು ಹೆಚ್ಚಾಗಿ ಇರುವುದು ವರದಿಯಿಂದ ತಿಳಿದುಬಂದಿದೆ. ಅಷ್ಟಕ್ಕೂ ನಿಯಮ ಉಲ್ಲಂಘಿಸಿದ ವಿಡಿಯೊಗಳು ಮತ್ತು ಚಾನಲ್‌ಗಳನ್ನು ಪತ್ತೆ ಹಚ್ಚಲು ಯೂಟ್ಯೂಬ್ ಬಳಸಿರುವುದು, ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವನ್ನು. ತನ್ನ ವೇದಿಕೆಯನ್ನು ಪಾರದರ್ಶಕ ಹಾಗೂ ನಿಯಮಬದ್ಧವಾಗಿಡಲು ಎಐ ಅಸ್ತ್ರವನ್ನು ಯೂಟ್ಯೂಬ್ ಪ್ರಯೋಗಿಸಿದೆ.

### ಕ್ರಮಕ್ಕೆ ಪೂರಕ ಕಾರಣಗಳು

ಡಿಲೀಟ್ ಆದ ಚಾನಲ್‌ಗಳು ಸ್ಪ್ಯಾಮ್ ಅಥವಾ ವಂಚನೆಗೆ ಪೂರಕವಾದಂತಹ ವಿಡಿಯೊಗಳನ್ನು ಅಪ್‌ಲೋಡ್ ಮಾಡುತ್ತಿದ್ದುದು ಈ ರೀತಿಯ ಕ್ರಮ ಕೈಗೊಳ್ಳಲು ಪ್ರಮುಖ ಕಾರಣವಾಗಿದೆ. ಈ ಬಗ್ಗೆ ವೀಕ್ಷಕರಿಂದಲೂ ದೂರುಗಳು ಯೂಟ್ಯೂಬ್‌ಗೆ ತಲುಪಿದ್ದವು. ಒಮ್ಮೆ ಚಾನಲ್ ಡಿಲೀಟ್ ಆದರೆ ಅದರಲ್ಲಿ ಈ ಹಿಂದೆ ಅಪ್‌ಲೋಡ್ ಮಾಡಲಾದ ಎಲ್ಲ ವಿಡಿಯೊಗಳು ಡಿಲೀಟ್ ಆಗುತ್ತವೆ. ಹೀಗಾಗಿ ಮುನ್ನೆಚ್ಚರಿಕೆಯಿಂದ ಪ್ಲಾಟ್‌ಫಾರ್ಮ್ ಬಳಸುವಂತೆ ಯೂಟ್ಯೂಬ್ ಸೂಚಿಸಿದೆ. ವಿಡಿಯೊಗೆ ಸಂಬಂಧವಿಲ್ಲದ ಕ್ಲಿಕ್‌ಬೈಟ್ ಶೀರ್ಷಿಕೆ ಅಥವಾ ಥಂಬ್‌ನೇಲ್‌ನೊಂದಿಗೆ ವಿಡಿಯೊಗಳನ್ನು ಅಪ್‌ಲೋಡ್ ಮಾಡುತ್ತಿದ್ದುದು ಮುಖ್ಯ ಕಾರಣವಾಗಿದೆ. ■




## ಐಒಎಸ್ 18.4 ಬಿಡುಗಡೆ

ಆ್ಯಪಲ್ ಕಂಪನಿಯು ತನ್ನ ಐಫೋನ್‌ಗಳಿಗೆ ಐಒಎಸ್ 18.4 ಬೀಟಾ 3 ಆವೃತ್ತಿಯನ್ನು ಈಚೆಗೆ ಬಿಡುಗಡೆ ಮಾಡಿದೆ. ಡೆವಲಪರ್‌ಗಳು ಹಾಗೂ ಬೀಟಾ ಬಳಕೆದಾರರು ಇದನ್ನು ಬಳಸಬಹುದಾಗಿದೆ. ಹಿಂದಿನ ಬೀಟಾ ಆವೃತ್ತಿಗಳಲ್ಲಿ ಕಂಡುಬಂದ ತಾಂತ್ರಿಕ ದೋಷಗಳನ್ನು ಸರಿಪಡಿಸುವ ಹಾಗೂ ಕಾರ್ಯಕ್ಷಮತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಬಿಡುಗಡೆ ಮಾಡಲಾಗಿದೆ.

ಈ ಆವೃತ್ತಿಯು ಆ್ಯಪಲ್ ಇಂಟೆಲಿಜೆನ್ಸ್, ಅಧಿಸೂಚನೆಗಳು, ಸಿರಿ, ವೈ–ಫೈ ಕರೆಗಳು, ಬರವಣಿಗೆ ಪರಿಕರಗಳು ಮತ್ತು ಇತರ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸುತ್ತದೆ ಎಂದು ಕಂಪನಿ ಹೇಳಿದೆ.

'ಆ್ಯಪಲ್ ಇಂಟೆಲಿಜೆನ್ಸ್'ನಲ್ಲಿನ ಮೂರು ಪ್ರಮುಖ ದೋಷಗಳನ್ನು ಸರಿಪಡಿಸಲಾಗಿದ್ದು, ವಿವಿಧ ಭಾಷೆಗಳಲ್ಲಿ ಸಿರಿ ಬಳಕೆಯ ಸಮಸ್ಯೆಗಳಿಗೂ ಪರಿಹಾರ ಕಲ್ಪಿಸಲಾಗಿದೆ. ಆ್ಯಪಲ್ ಇಂಟೆಲಿಜೆನ್ಸ್ ಫೀಚರ್‌ಗಳ ಲಭ್ಯತೆ ಹಾಗೂ ಡೌನ್‌ಲೋಡ್‌ಗೆ ಸಂಬಂಧಿಸಿದಂತೆ ತೊಡಕುಗಳನ್ನು ಹೊಸ ಆವೃತ್ತಿಯಲ್ಲಿ ನಿವಾರಿಸಲಾಗಿದೆ. ನೋಟಿಫಿಕೇಷನ್ ಬಂದಾಗ ಬ್ಲಿಂಕ್ ಆಗುವುದನ್ನೂ ನಿವಾರಿಸಲಾಗಿದೆ. ಇಂಗ್ಲಿಷ್ ಹೊರತುಪಡಿಸಿ ಇತರ ಭಾಷೆಗಳಲ್ಲಿ 'ಸಿರಿ' ಸಲಹೆಗಳು ಕಾರ್ಯನಿರ್ವಹಿಸುತ್ತಿರಲಿಲ್ಲ, ಇದನ್ನೂ ಸರಿಪಡಿಸಲಾಗಿದೆ. ಸೆಲ್ಯುಲಾರ್ ಗ್ರಾಹಕರು ಎದುರಿಸುತ್ತಿದ್ದ ವೈ–ಫೈ ಕರೆಗಳ ಸಮಸ್ಯೆಯನ್ನೂ ಬಗೆಹರಿಸಲಾಗಿದೆ. ■